ಶ್ರೀ ಟಿ.ಎಂ. ಮಂಜುನಾಥ್.—ಇಲ್ಲಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗಿದೆ ಎಂದು ಹೇಳಿದ್ದೀರಿ, ಆದನ್ನು ಯಾವಾಗ ಕಾರ್ಯಗತ ಮಾಡುತ್ತೀರಿ ಮತ್ತು ಅದರಿಂದ ಏನೇನು ಸೌಲಭ್ಯಗಳನ್ನು ಒದಗಿಸಿ ಕೊಡುತ್ತಿರಾ ಎಂಬುದನ್ನು ಹೇಳುತ್ತೀರಾ ?

ಶ್ರೀ ಕೆ.ಟಿ. ರಾಥೋಡ್.—ನಿರ್ದಿಷ್ಟವಾಗಿ ಈ ಕಾರ್ಯಕ್ರಮ ಎಂದಿನಿಂದ ಪ್ರಾರಂಭವಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ, ಒಂದು ಯೋಜನೆ ತಯಾರಾಗಿದೆ, ಅದನ್ನು ಜಾರಿಗೆ ಕೊಡಬೇಕೆಂಬುದು ಸರ್ಕಾರದ ಗಮನದಲ್ಲಿದೆ, ಅದನ್ನು ಮಾಡುತ್ತಾರೆ.

ಶ್ರೀ ಸಿ. ಬೈರೇಗೌಡ —ಈನೇಕಾರರ ಸಲುವಾಗಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗಿದೆ ಎಂದು ಇಲ್ಲಿ ಹೇಳಿದ್ದಿರಿ, ಅದರ ರೂಪುರೇಷಗಳೇನು ಎಂಬುದನ್ನು ಹೇಳುತ್ತಿರಾ ? ಮತ್ತು ಈ ಉಣ್ಣೆ ಎಲ್ಲೆಲ್ಲಿ ಸಿಗುತ್ತದೆ, ಆದನ್ನು ಉಪಯೋಗಿಸಿಕೊಳ್ಳುವ ಸಲುವಾಗಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಏನು ಕ್ರಮ ತೆಗೆದು ಕೊಂಡಿದ್ದೀರಿ ?

ಶ್ರೀ ಕೆ. ಟಿ. ರಾಥೋಡ್.—ಮಾನ್ಯ ಸದಸ್ಯರಿಗೆ ಗೊತ್ತಿದೆ, ಏನೆಂದರೆ ಈ ಉಣ್ಣೆಯನ್ನು ಉಪಯೋಗಿಸಿಕೊಳ್ಳಲು ಸಾಧಾರಣವಾಗಿ ಕಾಜೇಪಿ ಇಂಡಸ್ಟ್ರಿಜ್ಮೆಪ್ ಅಲ್ಲಿ ಬರಬೇಕಾಗುತ್ತದೆ. ಈಗ ಅಲ್ಲಿ ಎಷ್ಟು ಪ್ರಮಾಣದಲ್ಲಿರಾ-ಮೆಟೀರಿಯಲ್ ಸಿಗುತ್ತದೆಂಬುದನ್ನು ನೋಡಿಕೊಂಡು ಮುಂದಿನ ಕ್ರಮ ಕೈಕೊಳ್ಳುತ್ತೇವೆ. ಈಗ ಅಲ್ಲಿ ಉಣ್ಣೆ ಸಿಗುವುದರಿಂದ, ಅದರಿಂದ ಕಂಬಳಿ ತಯಾರುಮಾಡುವ ಯೋಜನೆಯನ್ನು ಕೈಕೊಳ್ಳಬೇಕಾಗುತ್ತದೆ. ಈ ದಿಶೆಯಲ್ಲಿ ಒಂದು ಯೋಜನೆ ಸಿದ್ಧಪಡಿಸಿದ್ದೇವೆ. ಅದರಿಂದ ಹೆಚ್ಚು ಜನರಿಗೆ ಅನುಕೂಲ ಮಾಡಿಕೊಡುತ್ತೇವೆ.

ಶ್ರೀ ಟಿ. ಎಂ. ಮಂಜುನಾಥ್.—ಇಲ್ಲಿ ಒಂದು ಯೋಜನೆ ಹಾಕಿಕೊಂಡಿದ್ದೇವೆಂದು ಹೇಳಿದ್ದಿರಿ, ಆದರೆ ಇನ್ನೂ ಜಾರಿಗೆ ಬಂದಿಲ್ಲ, ಅದನ್ನು ಯಾವಾಗ ಜಾರಿಗೆ ತರುತ್ತೀರಿ ಮತ್ತು ಯಾವಯಾವ ಸೌಲಭ್ಯಗಳನ್ನು ಒದಗಿಸಿಕೊಡುತ್ತೀರಿ ಎಂಬುದನ್ನು ತಾವು ದಯವಿಟ್ಟು ತಿಳಿಸಬೇಕೆ ?

ಶ್ರೀ ಕೆ. ಟಿ. ರಾಥೋಡ್.—ನಾನು ಈಗಾಗಲೇ ಹೇಳಿದೆ, ಅಲ್ಲಿ ಉಣ್ಣೆ ನೇಕಾರರು ಜಾಸ್ತಿ ಇರುವುದರಿಂದ, ಅವರಿಗೆ ಕಾಜೇಪ್ ಇಂಡಸ್ಟ್ರಿ ತರಹ ಸಹಾಯ ಬೇಕಾಗುತ್ತದೆ, ಮತ್ತು ಹಣದ ಸಹಾಯ ಅವರಿಗೆ ಬೇಕಾಗುತ್ತದೆ, ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಕಾರ್ಯಕ್ರಮ ಕೈಕೊಳ್ಳುತ್ತೇವೆ.

Grant of land to people cultivating forest land in Shimoga District

272. Sri S. M. SHEERNALY CHANDRASEKHAR (Hosanagar).—Will the Minister for Forests be pleased to state :—

(*a*) whether the Government is aware that thousand of Expropriated ryots who lost their lands in Sharavathy Submersion are cultivating Forest lands since 10 to 15 years in Shimoga District ;

(*b*) whether the Government is aware that other ryots in Shimoga District and elsewhere are also cultivating forest lands since a long time ;

(*c*) if so, the action Government proposes to take to solve this problem :

(*d*) whether the Government is aware that when the Chief Minister visited the Shimoga District during November, 1974, he had instructed the Deputy Commissioner, Shimoga to prepare a list of persons who are cultivating forest lands for considerable length of

time and to recommend to the Government the question of confirmation of land by giving equal area from other Government lands to to the Forest Department ;

(*e*) whether the Government has received such a report from the Deputy Commissioner, Shimoga ?

Sri C N. PATIL (Minister for Forests).—(*a*) and (*b*) A total extent of 18.506 acres of forest area is under encroachments in Shimoga District both by expropriated ryots and others. These encroachments have been taking place since the last about 15 years through majority of the cases are of recent origin.

(*c*) During the tour of Shimoga District during November 1974 some persons had submitted representations to the Chief Minister seeking regularisation of encroachments in forest area Chief Minister had issued instructions to the Deputy Commissioner and other concerned officials to get this matter examined.

(*d*) The report from the Deputy Commissioner is awaited. The subject of regularisation of encroachments in forest area or otherwise is under Government's consideration.

ಶ್ರೀ ಎಸ್. ಎಂ. ಶೀರಾಳಿ ಚಂದ್ರಶೇಖರ್.—ನನ್ನ 3 ಮತ್ತು 4ನೇ ಪ್ರಶ್ನೆಗಳೆರಡಕ್ಕೂ ಒಂದೇ ಉತ್ತರ ಕೊಟ್ಟಿದ್ದೀರಿ, ಅಂದರೆ ಈ ಸಮಸ್ಯೆಯನ್ನು ಯಾವ ರೀತಿ ಬಗೆಹರಿಸುತ್ತೀರಿ ?

ಶ್ರೀ ಸಿ. ಎನ್. ಪಾಟೀಲ್.— ಜಿಲ್ಲಾಧಿಕಾರಿಯವರಿಂದ ಎಷ್ಟು ಜನ ಅಕ್ರಮ ಸಾಗುವಳಿ ಮಾಡಿದ್ದಾರೆಂಬ ಬಗ್ಗೆ ಒಂದು ಪಟ್ಟಿ ಬರುವವರೆಗೆ ಆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ, ಅವರಿಂದ ಉತ್ತರ ಬಂದಮೇಲೆ ಅದನ್ನು ಬಗೆಹರಿಸಬಹುದು,

ಶ್ರೀ ಎಸ್. ಎಂ. ಶೀರಾಳಿ ಚಂದ್ರಶೇಖರ್.—ಆರು ತಿಂಗಳ ಕೆಳಗೆ ಜಿಲ್ಲಾಧಿಕಾರಿಯವರಿಂದ ಈ ಬಗ್ಗೆ ಒಂದು ಯಾದಿ ತಯಾರಾಗಿ ಬಂದಿದೆ, ಆದಕಾರಣ ಈ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಮೊದಲು ಈ ಪಟ್ಟಿಯನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲವೇ ?

ಶ್ರೀ ಸಿ. ಎನ್. ಪಾಟೀಲ್.— ಜಿಲ್ಲಾಧಿಕಾರಿಯವರಿಂದ ನಮಗೆ ಇನ್ನು ಪಟ್ಟಿ ತಯಾರಾಗಿ ಬಂದಿಲ್ಲ, ಅವರಿಂದ ನಮಗೆ ಒಂದು ಕಾಗದ ಮಾತ್ರ ತಾ : 11-4-1975ರಂದು ಬಂದಿದೆ. ಅದರಲ್ಲಿ ಶಿವಮೊಗ್ಗದ ಸ್ಪೆಷಲ್ ಡಿ. ಸಿ. ಅವರು ಏನು ಹೇಳಿದ್ದಾರೆಂದರೆ, ಅಕ್ರಮ ಸಾಗುವಳಿ ಮಾಡಿರುವವರ ಒಂದು ಪಟ್ಟಿಯನ್ನು ತಯಾರು ಮಾಡಲು ತಹಶೀಲ್ದಾರರಿಗೆ ಹೇಳಿದ್ದೇನೆ, ಅವು ಅದನ್ನು ತಯಾರು ಮಾಡಿದಮೇಲೆ ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಜಿಲ್ಲಾಧಿಕಾರಿಯವರಿಂದ ವರದಿ ಬಂದಮೇಲೆ ಇದನ್ನು ತೀರ್ಮಾನ ಮಾಡುತ್ತೇವೆಂದು ಹೇಳಿದಿರಿ, ಆದರೆ ಇದು ಡಿ. ಸಿ. ಅವರು ತೀರ್ಮಾನ ಮಾಡುವಂತಹ ಪ್ರಶ್ನೆಯಾಗಿಲ್ಲ, ಸರ್ಕಾರದವರೇ ತೀರ್ಮಾನ ಮಾಡಬೇಕಾಗಿದೆ. ಇಲ್ಲ ಶರಾವತಿ ನೀರಿನ ಮುಳುಗಡೆಯಿಂದಾಗಿ ಭೂಮಿ ಕಳೆದು ಕೊಂಡಿರುವವರು ಅಕ್ರಮ ಸಾಗುವಳಿ ಮಾಡುತ್ತಿದ್ದಾರೆ ಮತ್ತು ಭೂಮಿ ಇಲ್ಲದ ಬಡವರು ಸಹ ಅಕ್ರಮ ಸಾಗುವಳಿ ಮಾಡುತ್ತಿದ್ದಾರೆ. ಇದು ಒಂದು ನೀತಿಯ ಪ್ರಶ್ನೆಯಾಗಿದೆ, ಆದಕಾರಣ ಇದನ್ನು ತೀರ್ಮಾನ ಮಾಡುವ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಸಿ. ಎನ್. ಪಾಟೀಲ್.—ಇಲ್ಲಿರುವ ಪ್ರಶ್ನೆ ಎಂದರೆ, 10 ರಿಂದ 15 ವರ್ಷಗಳ ಕಾಲದಿಂದ ಯಾರು ಯಾರು ಅರಣ್ಯ ಜಮೀನನ್ನು ಒತ್ತುವರಿ ಮಾಡಿಕೊಂಡು ಸಾಗುವಳಿ ಮಾಡುತ್ತಿದ್ದಾರೆಂದು ಆ ಬಗ್ಗೆ ಇನ್‌ಫರ್‌ಮೇಷನ್ ಜಿಲ್ಲಾಧಿಕಾರಿಯವರಿಂದ ಬರದ ಹೊರತು ಸರ್ಕಾರ ಯಾವ ತೀರ್ಮಾನವನ್ನೂ ಕೈಕೊಳ್ಳುವುದಕ್ಕಾಗುವುದಿಲ್ಲ.

ಜಿಲ್ಲಾಧಿಕಾರಿಯವರಿಂದ ರಿಪೋರ್ಟ್ ಬಂದಮೇಲೆ ಸರ್ಕಾರ ಆ ಬಗ್ಗೆ ಯೋಗ್ಯ ನಿರ್ಣಯ ಕೈಕೊಳ್ಳುತ್ತದೆಂದು ಮಾನ್ಯ ಸಭೆಗೆ ತಿಳಿಸುತ್ತಿದ್ದೇನೆ.

ಶ್ರೀ ಎಸ್, ಎಂ. ಶಿರಾಳಿ ಚಂದ್ರಶೇಖರ್.—ನಾನು ಖಚಿತವಾಗಿ ಹೇಳುತ್ತೇನೆ, ಏನೆಂದರೆ ಜಿಲ್ಲಾಧಿಕಾರಿಯವರು ಈ ಬಗ್ಗೆ 8 ತಿಂಗಳ ಮೊದಲೇ ವರದಿಯನ್ನು ತಮಗೆ ಕಳುಹಿಸಿದ್ದಾರೆ, ಅವರಿಂದ ನಾನು ವರದಿ ತೆಗೆದುಕೊಂಡು ಬಂದೇ ಈ ಪ್ರಶ್ನೆ ಕೇಳುತ್ತಿರುವುದು. ಅವರಿಂದ ವರದಿ ಬಂದಿದ್ದರೂ ಸಹ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ಇದು ಮಾನವೀಯತೆಯ ಪ್ರಶ್ನೆಯಾಗಿದೆ ಮತ್ತು 25 ಸಾವಿರ ಕುಟುಂಬಗಳ ಪ್ರಶ್ನೆಯಾಗಿದೆ, ಈ ದೃಷ್ಟಿಯಿಂದರಾದರೂ ಇದನ್ನು ಕೂಡಲೇ ಬಗೆಹರಿಸುತ್ತೀರಾ ?

ಶ್ರೀ ಸಿ.ಎನ್. ಪಾಟೀಲ್.- ಅವರಿಂದ ಸರ್ಕಾರಕ್ಕೆ ಖಚಿತವಾಗಿ ವರದಿ ಬಂದಿಲ್ಲ, ವರದಿಯನ್ನು ಬೇಗನೆ ಕಳುಹಿಸಿಕೊಡುವಂತೆ ಡಿ. ಸಿ. ಅವರಿಗೆ ತಿಳಿಸುತ್ತೇನೆ, ಅವರಿಂದ ವರದಿ ಬಂದಕೂಡಲೆ ಒಂದು ಯೋಗ್ಯ ನಿರ್ಣಯವನ್ನು ಆದಷ್ಟು ಬೇಗ ತೆಗೆದುಕೊಳ್ಳುತ್ತೇನೆಂಬ ಆಶ್ವಾಸನೆಯನ್ನು ಕೊಡುತ್ತೇನೆ.

1-30 P.M.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈಗ ಯಾರು ಯಾರು ಯಾವರೀತಿ ಸಾಗುವಳಿಯನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಸೇರಿದಂತಹ ಭೂಮಿಯಲ್ಲಿ 10-5-3 ವರ್ಷಗಳಿಂದ ಮಾಡಿಕೊಂಡು ಬಂದಿದ್ದಾರೆ ಎಂದು ಪರಿಶೀಲನೆ ಮಾಡಬೇಕು. ಅವು ಸಾಗುವಳಿಗೆ ಯೋಗ್ಯವಾದ ಜಮೀನೇ ಎಂದು ತೀರ್ಮಾನ ಮಾಡಬೇಕು ಜೊತೆಗೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಸೇರಿದಂತಹ ಭೂಮಿ ತತ್ಸಮವಾಗಿ ತಮ್ಮ ಡಿಪಾರ್ಟ್‌ಮೆಂಟ್‌ಗೆ ಅಡಕವಾಗಿರುವ ಭೂಮಿ ತಮ್ಮ ಇಲಾಖೆಗೆ ಬರುತ್ತದೆಂದು ಇಟ್ಟುಕೊಳ್ಳೋಣ. ಸಾಗುವಳಿಗೆ ಯೋಗ್ಯವಾದ ಪ್ರದೇಶ ಅರಣ್ಯ ಇಲಾಖೆಗೆ ಸಂಬಂಧಪಟ್ಟದ್ದು ಇದ್ದರೂ ಯೋಗ್ಯವಾಗಿ ಸಾಗುವಳಿಗೆ ಬರುತ್ತದೆಂದು ಕಂಡು ಬಂದರೆ ತಾವು ಅದನ್ನು ಅವರಿಗೇ ಮಂಜೂರು ಮಾಡತಕ್ಕಂಥ ತೀರ್ಮಾನ ಸರ್ಕಾರ ತೆಗೆದುಕೊಳ್ಳಬೇಕು ಅಲ್ಲವೇ?

ಶ್ರೀ ಸಿ.ಎನ್. ಪಾಟೀಲ್.—ಸಾಗುವಳಿಗೆ ಯೋಗ್ಯವಾಗಿದೆಯೆನ್ನುವುದನ್ನೇ ಗಣನೆಗೆ ತೆಗೆದುಕೊಂಡು ಅರಣ್ಯದ ಜಮೀನನ್ನು ಸಾಗುವಳಿಗೆ ಮಂಜೂರು ಮಾಡಲು ಸಾಧ್ಯವಿಲ್ಲ. ಮಾನವೀಯತೆ ದೃಷ್ಟಿಯಿಂದ ನೋಡಿ ಮತ್ತು ಅರಣ್ಯದ ಹಿತದೃಷ್ಟಿಯಿಂದ ನೋಡಿಕೊಳ್ಳಬೇಕಾಗುತ್ತದೆ. ಇಲ್ಲದೆ ಸಾಗುವಳಿಯ ಒಂದೇ ದೃಷ್ಟಿಯಿಂದ ಅರಣ್ಯದ ಜಮೀನು ಕೊಡುವುದಾದರೆ ಅರಣ್ಯವನ್ನೆಲ್ಲಾ ಕೊಡಬಹುದು ಮುಂದೆ ಅರಣ್ಯವೇ ಉಳಿಯುವುದಿಲ್ಲ. ರೆವಿನ್ಯೂ ಡಿಪಾರ್ಟ್‌ಮೆಂಟಿನವರು ನಮಗೆ ಭೂಮಿಯನ್ನು ಒದಗಿಸಿಕೊಟ್ಟರೆ ಮತ್ತು ರಿಲೀಸ್ ಮಾಡಿದರೆ ಮಾತ್ರ ನಾವು ಕೊಡುತ್ತೇವೆಂದು ಹೇಳುವುದಿಲ್ಲ.

ಶ್ರೀ ಎಸ್. ಎಂ. ಶಿರಾಳಿ ಚಂದ್ರಶೇಖರ್.— ಸಾಗುವಳಿಗೆ ಯೋಗ್ಯವಾಗಿದೆಯೆಂದು ಜಮೀನನ್ನು ಕೊಡಿ ಎಂದು ಹೇಳುವುದಿಲ್ಲ. ಆ ಜಮೀನನ್ನು ಯಾರು ಸಾಗುಮಾಡುತ್ತಿದ್ದಾರೆ ಅವರು ಅದನ್ನು ಅಬಾದು ಮಾಡುವುದಕ್ಕೋಸ್ಕರ ಸಾವಿರಾರು ರೂಪಾಯಿ ಖರ್ಚುಮಾಡಿ ನೆಲವನ್ನು ಆಬಾದು ಮಾಡಿಕೊಂಡು ಬಂದಿದ್ದಾರೆ ಜೊತೆಗೆ ಡೆಪ್ಯುಟಿ ಕಮೀಷನರ್‌ರಿಂದ ವರದಿ ಬಂದಿದೆಯೆಂದು ಖಾತರಿಯಾಗಿದೆ ಆದ್ದರಿಂದ ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಬಂದಿಲ್ಲ. ಆದ್ದರಿಂದ ಈ ಪ್ರಶ್ನೆಯನ್ನು ತಡೆಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮುಂದಿನ ಪ್ರಶ್ನೆಯನ್ನು ಕೇಳಬಹುದು.